**ಓ ಎಸ್ ನಂ. 9/2021 ಡಿಡಬ್ಲ್ಯೂ.2**

**ಸಾಕ್ಷಿಯನ್ನು ದಿಃ 22.01.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಸ್ ವಕೀಲರಿಂದಃ**

ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ನೋಟೀಸು ಬಂದಿದ್ದು ಅದನ್ನು ಶ್ರೀನಿವಾಸ್ ರವರು ನನಗೆ ತಂದು ಕೊಟ್ಟ ಕಾರಣ ನಾನು ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬಂದೆ. ಇಂದು ನಾನು ಅವರ ಜೊತೆ ಬಂದಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವಂತೆ ನಾನು ಸ್ವಾಧೀನ ಹೊಂದಿರುವ ಸ್ವತ್ತಿನ ಖಾತಾ ನಂಬರು ನನಗೆ ಗೊತ್ತಿಲ್ಲ. ಆ ಸ್ವತ್ತಿನ ಪೂರ್ವಕ್ಕೆಃ ಜಯರಾಮರವರ ಆಸ್ತಿ, ಪಶ್ಚಿಮಕ್ಕೆ ಮಂಜಣ್ಣನ ಆಸ್ತಿ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆಃ ಕುಮಾರ್ ರವರ ಆಸ್ತಿ ಇದೆ.ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯ ಸಂಗತಿಳನ್ನು ನಾನು ತಿಳಿದುಕೊಂಡಿದ್ದೇನೆ. ರೂ.1,50,000/- ಹಣ ನೀಡಿ ಮನೆಯನ್ನು ಭೋಗ್ಯ ಹಾಕಿಕೊಂಡಿದ್ದೇನೆ ಎಂದು ಬರೆಸಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ಶ್ರೀನಿವಾಸ್ ರವರ ಹೇಳಿಕೆ ಮೇರೆಗೆ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಶ್ರೀನಿವಾಸ್ ಚೆನ್ನಾಗಿದ್ದೇವೆ ಎಂದರೆ ಸರಿ. ಸದರಿ ಮನೆಯಲ್ಲಿ ಮೊದಲು ವೆಂಕಟೇಶ್ ರವರು ಇದ್ದರು, ಆನಂತರ ನನಗೆ ನೀಡಿದ್ದಾರೆ. ವೆಂಕಟೇಶ್ ರವರು ಸ್ವಾಧೀನ ಹೊಂದಿದ್ದ ಸ್ವತ್ತನ್ನು ನನಗೆ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂತಹ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ರೂ.1,50,000/- ಹಣ ನೀಡಿದ್ದೇನೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ನಾನು ಹೇಳಿರುವ ಚಕ್ಕುಬಂದಿಗಳು ಸುಳ್ಳಾಗಿದ್ದು ನಾನು ಒಂದು ವೇಳೆ ಸ್ವತ್ತಿನ ಸ್ವಾಧೀನ ಹೊಂದಿದ್ದರೆ ಚಕ್ಕುಬಂದಿಗಳನ್ನು ಸರಿಯಾಗಿ ಹೇಳುತ್ತಿದ್ದೆ ಎಂದರೆ ಸರಿಯಲ್ಲ. ನಾನು ಶ್ರೀನಿವಾಸ್ ರವರ ಜೊತೆ ಚೆನ್ನಾಗಿರುವ ಕಾರಣ ಅವರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯಲು ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ವೆಂಕಟೇಶ್ ರವರ ನಡುವೆ ಯಾವುದೇ ಕರಾರು ಆಗದೆ ಇದ್ದರೂ ಸಹ ನಾನು

ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಭೋಗ್ಯ ಮಾಡಲು ವೆಂಕಟೇಶ್ ರವರಿಗೆ ಮಾತ್ರ ಹಕ್ಕು ಇರದೆ ಎಲ್ಲರಿಗೂ ಇರುವ ಕಾರಣ ನನಗೆ ಭೋಗ್ಯ ಮಾಡಿಲ್ಲ ಎಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಗಳಿಗೆ ಸಾಧ್ಯವಾದರೆ ಅನುಕೂಲ ಮಾಡಿಕೊಡಲು ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**